# 4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು

ಎಸ್‌ಸಿ. 257/2021

| | | | |
|---|---|---|---|
| ಸಾಕ್ಷಿದಾರರ ಹೆಸರು | ಃ ಶ್ರೀ ಪ್ರವೀಣ್ | | ಪ್ರಮಾಣ ಮಾಡಿಸಿದ ದಿನಾಂಕಃ |
| ತಂದೆ/ಗಂಡನ ಹೆಸರು | ಃ ಶ್ರೀ ಚಂದ್ರಶೇಖರ್ | | **12.06.2025** |
| ವಯಸ್ಸು | ಃ 33 ವರ್ಷ | | |
| ವೃತ್ತಿ | ಃ ವ್ಯವಹಾರ | ಪ್ರಾ.ಸಾ. | ಃ 12 |
| ವಾಸಸ್ಥಳ | ಃ ಕೆ.ಆರ್.ಮೊಹಲ್ಲಾ, ಮೈಸೂರು | ಚಾ.ಸಾ. | ಃ 08 |

**ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರಿಂದಃ**

. ನಾನು ನನ್ನ ಸಹಿಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿದಾರರಿಗೆ ಅಮಾನತ್ತು ಮಹಜರ್ ಅನ್ನು ತೋರಿಸಲಾಯಿತು ಸಾಕ್ಷಿದಾರರು ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅಮಾನತ್ತು ಮಹಜರ್ ಅನ್ನು ಈಗಾಗಲೇ ನಿ.ಪಿ-*9* ಎಂದು ಗುರುತಿಸಲ್ಪಟ್ಟಿದ್ದು ಸಾಕ್ಷಿದಾರರ ಸಹಿಯನ್ನು ನಿಪಿ-*9(ಬಿ)* ಎಂದು ಗುರುತಿಸಲಾಯಿತು. ಈಗ್ಗೆ *3-4* ವರ್ಷಗಳ ಹಿಂದೆ ನಾನು ಆಫೀಸ್ ನಿಂದ ಮನೆಗೆ ನಡೆದುಕೊಂಡು ಹೋಗುತ್ತಾ ಇದ್ದೆ ಪೊಲೀಸ್ ಇಲಾಖೆಯವರು ಟೀ ಅಂಗಡಿ ಬಳಿ ನಿಂತಿದ್ದರು ನನ್ನನ್ನು ಕರೆದರು ಕೈಯಲ್ಲಿ ದಾಖಲೆಗಳನ್ನು ಹಿಡಿದುಕೊಂಡಿದ್ದರು ಒಂದು ಸಹಿ ಮಾಡು ಎಂದು ಹೇಳಿದ್ದರು ಅದಕ್ಕೆ ನಾನು ಸಹಿ ಮಾಡಿದ್ದೆ ವಿಳಾಸವನ್ನು ಹೇಳಿದ್ದೆ. ನಾನು ಈಗ ನಾನು ನೋಡುತ್ತಿರುವ ನ್ಯಾಯಾಲಯದ ಮುಂದೆ

ಹಾಜರು ಇರುವ ಆರೋಪಿತರು ಆ ಸಮಯದಲ್ಲಿ ಇರಲಿಲ್ಲ ಮತ್ತು ನನ್ನ ಮುಂದೆ ಏನನ್ನು ಅಮಾನತ್ತು ಪಡಿಸಿಕೊಂಡಿರಲಿಲ್ಲ.

*ಈ ಹಂತದಲ್ಲಿ, ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಸರ್ಕಾರಿ ಅಭಿಯೋಜಕರು ಅನುಮತಿ ಕೋರಿದ್ದಾರೆ. ಸಾಕ್ಷಿಯ ಹೇಳಿಕೆಯನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.*

*ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ-*

2. ದಿಃ21.10.2020 ರಂದು ಮದ್ಯಾಹ್ಞ 2 ಗಂಟೆ ವೇಳೆಯಲ್ಲಿ 1ನೇ ಆರೋಪಿತನನ್ನು ಪೊಲೀಸರು ಅಂಗಶೋಧನೆ ಮಾಡಿದಾಗ ಆತನ ಕಡೆ ರೇಜರ್ ಇದ್ದು ಅದನ್ನು ಹಾಜರುಪಡಿಸಿದ್ದು ನನ್ನ ಸಮಕ್ಷಮ ಅದನ್ನು ಅಮಾನತ್ತು ಪಡಿಸಿಕೊಂಡು ಸಹಿ ತೆಗೆದುಕೊಂಡಿದ್ದರು ಎಂದರೆ ಸರಿಯಲ್ಲ. ಆ ವೇಳೆಯಲ್ಲಿ ನಾನು ನಿ.ಪಿ-9 ಕ್ಕೆ ಸಹಿ ಹಾಕಿದ್ದು ಆರೋಪಿತನಿಗೆ ಸಹಾಯ ಮಾಡಬೇಕು ಎನ್ನುವ ಉದ್ದೇಶದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲು ಃ ಆರೋಪಿ ಪರ ವಕೀಲರವರಿಂದಃ- ಇಲ್ಲ

ಮರು ವಿಚಾರಣೆಃ- ಇಲ್ಲ.

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

*ಓ ಹೇ ಕೇ ಸ ಇ ಎ ಒ.,*

*4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,*
*ಮೈಸೂರು*